ಎ.ಬಿ. ನಿಯಮ ಸರಳೀಕರಣ

565 (698) ಶ್ರೀ ಕೆ.ರಾಜು (ರಾಮನಗರ) ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರೈತರು ಭೂಮಿ ಖರೀದಿಸಲು ಈಗಿರುವ 79–ಎ/ಬಿ. ನಿಯಮದ ಪ್ರಕಾರ ರೂ.2 ಲಕ್ಷಕ್ಕಿಂತ ಹೆಚ್ಚಿಗೆ ಮಾಡಿ ಹಾಲಿ ನಿಯಮವನ್ನು ಸರಳೀಕರಿಸಲು ಸರ್ಕಾರ ಉದ್ದೇಶಿಸಿದೆಯೇ;

(ಆ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು (ಮಾಹಿತಿ ನೀಡುವುದು).

ಶ್ರೀ ಡಿ.ವಿ. ಸದಾನಂದಗೌಡ: (ಮಾನ್ಯ ಮುಖ್ಯಮಂತ್ರಿಗಳು)

(ಅ) ಹೌದು. ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಉದ್ಭವಿಸುವುದಿಲ್ಲ.

ಜಮೀನಿನ ಪೋಡಿ ದುರಸ್ತಿ

566 (699) ಶ್ರೀ ರಾಜು.ಕೆ (ರಾಮನಗರ) ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಮನಗರ ಜಿಲ್ಲೆಯಲ್ಲಿ 11ಇ ಸ್ಕೆಚ್ ಮುಖಾಂತರ ಕ್ರಯವಾದ ಜಮೀನನ್ನು ಪೋಡಿ ದುರಸ್ತಿ ಪಡಿಸುವ ಮತ್ತು ಸಾಗುವಳಿ ಚೀಟಿ ಮುಖಾಂತರ ಭೂಮಿ ಪಡೆದ ರೈತರ ಜಮೀನನ್ನು ಪೋಡಿ ದುರಸ್ತಿ ಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ?

(ಆ) ಹಾಗಿದ್ದಲ್ಲಿ, ಈ ನಿಯಮವನ್ನು ಎಂದಿನಿಂದ ಜಾರಿಗೊಳಿಸಲಾಗುವುದು (ಮಾಹಿತಿ ನೀಡುವುದು)?

ಶ್ರೀ ಡಿ.ವಿ. ಸದಾನಂದಗೌಡ: (ಮಾನ್ಯ ಮುಖ್ಯಮಂತ್ರಿಗಳು)

(ಅ) ರಾಮನಗರ ಜಿಲ್ಲೆಯ ವ್ಯಾಪ್ತಿಗೊಳಪಟ್ಟ ರಾಮನಗರ/ಚನ್ನಪಟ್ಟಣ/ಮಾಗಡಿ ಮತ್ತು ಕನಕಪುರ ಈ ಎಲ್ಲಾ ತಾಲ್ಲೂಕುಗಳಲ್ಲಿ 11ಇ ನಕ್ಷೆ ಮುಖಾಂತರ ಕ್ರಯವಾಗಿ ಬಂದ ಪ್ರಕರಣಗಳನ್ನು ಇಂಟಿಗ್ರೇಟೆಡ್ ಮ್ಯುಟೇಶನ್ ಪೋಡಿ (ಐ.ಎಂ.ಪಿ) ಮುಖಾಂತರ ಪೋಡಿ ಮಾಡಲಾಗುತ್ತಿದೆ ಮತ್ತು ಭೂ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರತಿ

ಪ್ರಕರಣಗಳ ಸಂಬಂಧ ಸರ್ವೆ ನಂಬರುವಾರು, ಗ್ರಾಮವಾರು, ಕ್ಯಾಟಲಾಗ್ ಮತ್ತು ಒಂಡೆಂಕ್ಸಿಂಗ್ ಮಾಡಿಕೊಂಡು ನಂತರ ನಮೂನೆ ನಂ. 1,2,3,4 ಮತ್ತು 5 ರಲ್ಲಿ ಮಾಹಿತಿ ತಯಾರಿಸಿಕೊಂಡು ನಂತರ ಪೋಡಿ ಮಾಡಲು ಕ್ರಮಕೈಗೊಳ್ಳಲಾಗುತ್ತದೆ. ಸದರಿ ಕೆಲಸಕ್ಕೆ ಸದ್ಯಕ್ಕೆ ಭೂಮಾಪಕರ ಕೊರತೆ ಇರುತ್ತದೆ. ಆದರೂ ಲಭ್ಯವಿರುವ ಭೂಮಾಪಕರ ಸೇವೆಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಪೋಡಿ ಅಂದೋಳನ ಮೂಲಕ ಎಲ್ಲಾ ಮಂಜೂರಿದಾರರಿಗೂ ಸರ್ವೆ ನಂಬರುವಾರು ಮತ್ತು ಗ್ರಾಮವಾರು ಪೋಡಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

(ಆ) ಮೇಲ್ಕಂಡ ವಿಷಯದಂತೆ ಈಗಾಗಲೇ ಜಾರಿಯಲ್ಲಿರುತ್ತದೆ.

ದಿನಗೂಲಿ ನೌಕರನ್ನು ಖಾಯಂಗೊಳಿಸುವುದು

567 (700) ಶ್ರೀ ರಾಜು.ಕೆ (ರಾಮನಗರ):– ಮಾನ್ಯ ಮುಖ್ಯಮಂತ್ರಿಯವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಸುಮಾರು 20 ವರ್ಷಗಳಿಂದ ದಿನಗೂಲಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಇವರುಗಳನ್ನು ಖಾಯಂಗೊಳಿಸಲು ಸರ್ಕಾರ ನಿಯಮಾವಳಿ ಗಳನ್ನೇನಾದರೂ ರೂಪಿಸಿದೆಯೇ;

(ಇ) ಹಾಗಿದ್ದಲ್ಲಿ, ನಿಯಮಾವಳಿಗಳ ಪ್ರಕಾರ ಇವರುಗಳನ್ನು ಖಾಯಂಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

(ಈ) ಇವರುಗಳನ್ನು ಖಾಯಂಗೊಳಿಸಿದ ನಂತರ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ನೀಡಲಾಗುವುದೇ?

ಶ್ರೀ ಡಿ.ವಿ. ಸದಾನಂದಗೌಡ: (ಮಾನ್ಯ ಮುಖ್ಯಮಂತ್ರಿಗಳು)

(ಅ) ದಿನಾಂಕ 1.7.1984 ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ದಿನಾಂಕ 10.4.2006 ರಂದು ಉಮಾದೇವಿ